(ಆ) ರಾಜ್ಯದಲ್ಲಿ ಅಭಾವ ಪೀಡಿತ ಪ್ರದೇಶಗಳಲ್ಲಿ ಹಳ್ಳಿಯ ರೈತರು ನೀರಾವರಿ ಸೌಲಭ್ಯವನ್ನು ಪಡೆದುಕೊಳ್ಳಲು ನೀರಾವರಿ ಭಾವಿ ಹಾಗೂ ನೀರಾವರಿ ಕೊಳವೆ ಭಾವಿಗಳನ್ನು ತೋಡುತ್ತಿರುವುದರಿಂದ ಅವುಗಳಿಗೆ ಬೇಕಾಗುವ ವಿದ್ಯುತ್ತು ಪೂರೈಕೆಯ ಸಲುವಾಗಿ ಮುಂಜಾಗ್ರತವಾಗಿ ಸರ್ಕಾರದವರು ಕೈಗೊಂಡ ಕ್ರಮಗಳು ಯಾವುವು.

ಶ್ರೀ ಜೆ. ಎಸ್. ದೇಶ್‌ಮುಖ್ (ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

(ಆ) ರಾಜ್ಯದಲ್ಲಿ ೩೧ ಆಕ್ಟೋಬರ್ ೧೯೮೫ರಲ್ಲಿ ಮುಂಡಳಿಯಲ್ಲಿ ನೊಂದಾಯಿಸಲ್ಪಟ್ಟಿರುವ ಅರ್ಜಿಗಳ ಪೈಕಿ ೩೫೫೭೦ ಭಾವಿಗಳಿಗೆ (ಕೊಳವೆ ಭಾವಿಗಳೂ ಸೇರಿ) ವಿದ್ಯುತ್ ಸರಬರಾಜು ಮಾಡ ಬೇಕಾಗಿದೆ, ಇವುಗಳು ವಿವಿಧ ಹಂತದಲ್ಲಿವೆ.

(ಆ) ರಾಜ್ಯದಲ್ಲಿ ಮಳೆ ವಿಫಲವಾದ ಕಾರಣ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಬೇಡಿಕೆ ಹೆಚ್ಚಾಗಿದೆ. ಮಂಡಳಿಯು ಆರ್ಥಿಕ ಸಂಪನ್ಮೂಲಕ್ಕನುಗುಣವಾಗಿ ಗಂರಿ ಹಾಕಿಕೊಂಡು ವಿದ್ಯುದ್ದೀಕರಣಕ್ಕೆ ಬೇಕಾಗುವ ಸಾಮಾನ್ಯಗಳನ್ನು ಖರೀದಿಸಂತ್ತಿದೆ. ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸುವಲ್ಲಿ ಸಾಧ್ಯವಾದಷ್ಟು ಹೆಚ್ಚು ಅನ್ಯತೆ ತೋರಿಸಿ ಪ್ರಗತಿ ಸಾಧಿಸಲಾಗಿದೆ. ನೊಂದಾಯಿಸಲ್ಪಟ್ಟ ಎಲ್ಲಾ ಅರ್ಜಿಗಳ ಪ್ರಕರಣಗಳಲ್ಲೂ ಮುಂದಿನ ಕ್ರಮ ಶೀಘ್ರವಾಗಿ ತೆಗೆದುಂ ಕೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ತುಂಡು ಭೂಮಿ ನೊಂದಾಯಿಸುವ ಬಗ್ಗೆ

೧೪೮. ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಕಂದಾಯ ಹಾಗೂ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

ಅ) ತುಂಡು ಭೂಮಿ ನೋಂದಾಯಿಸುವ ಬಗ್ಗೆ ಕಾನೂನು ಮಾಡುವ ವಿಚಾರ ಸರ್ಕಾರದವರ ಪರಿಶೀಲನೆಯಲ್ಲಿದೆಯೇ ?

ಆ) ರಾಜ್ಯದಲ್ಲಿ ಜಂಟೀ ಕುಟುಂಬ ವಿಭಾಗವಾದ ನಂತರ ತುಂಡು ಭೂಮಿ ನೋಂದಣಿ ಆಗದೇ ಇರುವುದರಿಂದ, ನೋಂದಣಿ ಆಗದೆ ಉಳಿದಿರುವ ಪ್ರಕರಣಗಳೆಷ್ಟು ?

ಇ) ಆ ಪೈಕಿ ಚಿಕ್ಕಮಗಳೂರಿನ ಜಿಲ್ಲೆಯಲ್ಲಿ ಸದರಿ ಪ್ರಕರಣಗಳ ಸಂಖ್ಯೆ ಎಷ್ಟು ?

ಶ್ರೀ ಎಸ್.ಆರ್. ಬೋಮ್ಮಾಯಿ.—ಕಂದಾಯ ಹಾಗೂ ಯೋಜನಾ ಸಚಿವರು.

ಅ) ಇಂತಹ ವಿಚಾರ ಸರ್ಕಾರದವರ ಪರಿಶೀಲನೆಯಲ್ಲಿ ಇಲ್ಲ.

ಆ) ಕರ್ನಾಟಕ ತುಂಡು ಭೂಮಿ ಹಾಗೂ ಕ್ರೋಢೀಕರಣ ಕಾನೂನು ವಿರುದ್ಧವಾಗಿ, ದಸ್ತಾವೇಜುಗಳನ್ನು ನೊಂದಾಯಿಸಬಾರದೆಂದು ಈಗಾಗಲೇ ಆದೇಶವಿರುವುದರಿಂದ, ಹಾಗೂ ಅಂತಹ ದಸ್ತಾವೇಜುಗಳು ನೋಂದಣಿ ಆಗದೇ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) (ಅ)ಗೇ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿನ ಬರಗಾಲದ ಬವಣೆಯನ್ನು ಸುಧಾರಿಸುವ ಬಗ್ಗೆ

೧೮೦. ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ಕಂದಾಯ ಹಾಗೂ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಎದುರಾಗಿರುವ ತೀವ್ರ ಬರಗಾಲದ ಬವಣೆ ಎದುರಿಸಲು ಸರಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು ?

ಆ) ಚಿತ್ರದುರ್ಗ ಜಿಲ್ಲೆಯ ಹಳ್ಳಿಗಳಿಗೆ ಹುಲ್ಲು ಸರಬರಾಜು ಮಾಡಲು ಸರಕಾರದವರು ಏನ್ನ ಕ್ರಮ ಕೈಗೊಂಡಿದ್ದಾರೆ.

ಇ) ಹಾಗಿದ್ದಲ್ಲಿ ಇದುವರೆಗೆ ಈ ಸಾಲಿನಲ್ಲಿ ಹೊಸದುರ್ಗ ತಾಲ್ಲೂಕಿಗೆ ಎಷ್ಟು ಪ್ರಮಾಣದಲ್ಲಿ ಹುಲ್ಲು ಸರಬರಾಜು ಮಾಡಲಾಗಿದೆ ?